## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1386 (1491)
ಸದಸ್ಯರ ಹೆಸರು : ಶ್ರೀ ಡಿ.ಟಿ. ಶ್ರೀನಿವಾಸ್
ಉತ್ತರಿಸಬೇಕಾದ ದಿನಾಂಕ : 17.03.2026
ಉತ್ತರಿಸಬೇಕಾದ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಗರಸಭೆ, ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿವೇಶನಗಳನ್ನು ಮತ್ತು ಕಟ್ಟಡಗಳನ್ನು ನಿರ್ಮಾಣ ಮಾಡಿರುವ ಸಂಖ್ಯೆ ಎಷ್ಟು; (ನಗರಸಭೆ ಮತ್ತು ಮಹಾನಗರ ಪಾಲಿಕೆವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿನ ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿವೇಶನಗಳನ್ನು ಮತ್ತು ಕಟ್ಟಡಗಳನ್ನು ನಿರ್ಮಾಣ ಮಾಡಿರುವ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಈ ರೀತಿಯಾಗಿ ನಿರ್ಮಾಣವಾಗಿರುವ ಅನಧಿಕೃತ ನಿವೇಶನ ಮತ್ತು ಕಟ್ಟಡಗಳಿಗೆ 'ಬಿ' ಖಾತೆ ನೀಡುವ ಯೋಜನೆ ಜಾರಿಯಿಂದ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; ಎಷ್ಟು ಜನ ಅರ್ಜಿ ಸಲ್ಲಿಸಿರುತ್ತಾರೆ; ಎಷ್ಟು ಅರ್ಜಿಗಳನ್ನು ವಿಲೇ ಮಾಡಲಾಗಿದೆ; (ನಗರಸಭೆ ಮತ್ತು ಮಹಾನಗರಪಾಲಿಕೆವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿನ ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅನಧಿಕೃತ ನಿವೇಶನ ಮತ್ತು ಕಟ್ಟಡಗಳಿಗೆ 'ಬಿ' ಖಾತೆ ಕೋರಿ ಸಲ್ಲಿಸಿದ ಅರ್ಜಿಗಳ ವಿವರ ಹಾಗೂ ವಿಲೇಗೊಳಿಸಿರುವ ಅರ್ಜಿಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಇ) | ಈ ನಗರಸಭೆ ಮತ್ತು ಮಹಾನಗರಪಾಲಿಕೆ ವ್ಯಾಪ್ತಿಯ ಅನಧಿಕೃತವಾಗಿ ನಿರ್ಮಾಣಗೊಂಡ ಆಸ್ತಿಗಳಿಗೆ 'ಎ' ಖಾತೆ ವಿತರಿಸುವ ಪ್ರಸ್ತಾವ ಸರ್ಕಾರದಲ್ಲಿದೆಯೇ; ಇದ್ದಲ್ಲಿ ಯಾವ ದಿನಾಂಕದಿಂದ ಜಾರಿಗೆ ತರಲಾಗುವುದು; ಮತ್ತು ನಿವೇಶನಗಳಿಗೆ ಹಾಗೂ ಕಟ್ಟಡಗಳಿಗೆ ನಿಗಧಿಪಡಿಸುವ ಶುಲ್ಕವೆಷ್ಟು; ಮಾಹಿತಿ ನೀಡುವುದು; | ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಅನ್ನು ಉಲ್ಲಂಘಿಸಿ, ಅನಧಿಕೃತವಾಗಿ ರಚಿಸಿರುವ ಬಡಾವಣೆಗಳಲ್ಲಿನ ಬಿ-ಖಾತಾ ನಿವೇಶನ / ಕಟ್ಟಡ / ಅಪಾರ್ಟ್‌ಮೆಂಟ್ / ಫ್ಲಾಟ್‌ಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಎ-ಖಾತಾ ನೀಡಲು ಸರ್ಕಾರದ ಆದೇಶ ಸಂಖ್ಯೆ: ನಅಇ 178 ಜಿಇಎಲ್ 2025 (ಇ), ದಿನಾಂಕ 17.01.2026 ರಲ್ಲಿ ಅನುಮೋದನೆ ನೀಡಲಾಗಿದೆ.<br><br>ಬಿ-ಖಾತಾ ದಿಂದ ಎ-ಖಾತಾ ನೀಡಲು ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಅಗತ್ಯವಿರುವುದರಿಂದ ಸಂಬಂಧಿಸಿದ ಪ್ರಾಧಿಕಾರಗಳು ವಿಧಿಸುವ ಶುಲ್ಕವನ್ನು ಅರ್ಜಿದಾರರು ಪಾವತಿಸಬೇಕಾಗುತ್ತದೆ. |
| ಈ) | ಪ್ರಸ್ತುತ ನೀಡುತ್ತಿರುವ 'ಬಿ' ಖಾತೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಸಮರ್ಪಕವಾಗಿ ನಿಗದಿತ ದಿನಾಂಕದಲ್ಲಿ ವಿತರಣೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು? | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಸ್ತುತ ನೀಡುತ್ತಿರುವ 'ಬಿ' ಖಾತೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಸಮರ್ಪಕವಾಗಿ ನಿಗದಿತ ದಿನಾಂಕದಲ್ಲಿ ವಿತರಣೆ ಮಾಡದೇ ಇರುವ ಕುರಿತು ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ನಅಇ 100 ಜಿಇಎಲ್ 2026 (ಇ)**

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

# ಅನುಬಂಧ-1

## ರಾಜ್ಯದಲ್ಲಿ ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯ ಅನಧಿಕೃತ ನಿವೇಶನಗಳನ್ನು ಮತ್ತು ಕಟ್ಟಡಗಳನ್ನು ನಿರ್ಮಾಣ ಮಾಡಿದ ವಿವರ

| ಕ್ರ.ಸಂ | ಜಿಲ್ಲೆಗಳ ಹೆಸರು | ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯ ಅನಧಿಕೃತ ನಿವೇಶನಗಳನ್ನು ಮತ್ತು ಕಟ್ಟಡಗಳನ್ನು ನಿರ್ಮಾಣ ಮಾಡಿದ ವಿವರ. | |
|---|---|---|---|
| | | ನಗರಸಭೆ/ಮಹಾನಗರಸಭೆ ಹೆಸರು | ನಿವೇಶನಗಳು /ಕಟ್ಟಡಗಳ ಸಂಖ್ಯೆ: |
| 01 | ಬಾಗಲಕೋಟೆ | ಬಾಗಲಕೋಟೆ ನಗರಸಭೆ | 1890 |
| | | ರಬಕವಿ ಬನಹಟ್ಟಿ ನಗರಸಭೆ | 2115 |
| | | ಜಮಖಂಡಿ ನಗರಸಭೆ | 6162 |
| | | ಇಲಕಲ್ ನಗರಸಭೆ | 378 |
| | | ಮುಧೋಳ ನಗರಸಭೆ | 3710 |
| 02 | ಬಳ್ಳಾರಿ | ಮಹಾನಗರ ಪಾಲಿಕೆ ಬಳ್ಳಾರಿ | 33945 |
| | | ನಗರಸಭೆ ಶಿರಗುಪ್ಪ | 7065 |
| 03 | ಬೆಳಗಾವಿ | ಬೆಳಗಾವಿ ಮಹಾನಗರ ಪಾಲಿಕೆ | 31526 |
| | | ನಿಪ್ಪಾಣಿ ನಗರಸಭೆ | 587 |
| | | ಸವದತ್ತಿ ನಗರಸಭೆ | 362 |
| | | ಬೈಲಹೊಂಗಲ ನಗರಸಭೆ | 3510 |
| | | ಗೋಕಾಕ ನಗರಸಭೆ | 638 |
| 04 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ ನಗರಸಭೆ | 9870 |
| | | ಹೊಸಕೋಟೆ ನಗರಸಭೆ | 18743 |
| | | ನೆಲಮಂಗಲ ನಗರಸಭೆ | 32897 |
| 05 | ಬೆಂಗಳೂರು ನಗರ | ಮಾದನಾಯಕನಹಳ್ಳಿ ನಗರಸಭೆ | 31014 |
| | | ಹೆಬ್ಬಗೋಡಿ ನಗರಸಭೆ | 13557 |
| 06 | ಬೀದರ್ | ಮಹಾನಗರ ಪಾಲಿಕೆ ಬೀದರ | 12562 |
| | | ಬಸವಕಲ್ಯಾಣ ನಗರಸಭೆ | 2252 |
| 07 | ಚಾಮರಾಜನಗರ | ನಗರಸಭೆ ಚಾಮರಾಜನಗರ | 1275 |
| | | ಕೊಳ್ಳೇಗಾಲ ನಗರಸಭೆ | 1312 |
| 08 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ನಗರಸಭೆ | 8617 |
| | | ಚಿಂತಾಮಣಿ ನಗರಸಭೆ | 8765 |
| | | ಶಿಡ್ಲಘಟ್ಟ ನಗರಸಭೆ | 3860 |
| | | ಗೌರಿಬಿದನೂರು ನಗರಸಭೆ | 3043 |
| 09 | ಚಿಕ್ಕಮಗಳೂರು | ಚಿಕ್ಕಮಗಳೂರು ನಗರಸಭೆ | 4106 |
| 10 | ಚಿತ್ರದುರ್ಗ | ಚಿತ್ರದುರ್ಗ ನಗರಸಭೆ | 2732 |

| | | | |
|---|---|---|---|
| | | ಚಳ್ಳಕೆರೆ ನಗರಸಭೆ | 260 |
| | | ಹಿರಿಯೂರು ನಗರಸಭೆ | 753 |
| 11 | ದಕ್ಷಿಣ ಕನ್ನಡ | ಮಂಗಳೂರು ಮನಪಾ | 980 |
| | | ಪುತ್ತೂರು ನಗರಸಭೆ | 827 |
| | | ಉಳ್ಳಾಲ ನಗರಸಭೆ | 417 |
| 12 | ದಾವಣಗೆರೆ | ದಾವಣಗೆರೆ ಮಹಾನಗರಪಾಲಿಕೆ | 15296 |
| | | ಹರಿಹರ ನಗರಸಭೆ | 3605 |
| 13 | ಧಾರವಾಡ | ಹು-ಧಾ ಮಹಾನಗರ ಪಾಲಿಕೆ | -- |
| 14 | ಗದಗ | ಗದಗ –ಬೆಟಗೇರಿ ನಗರಸಭೆ | 00 |
| 15 | ಹಾಸನ | ಹಾಸನ ಮಹಾನಗರ ಪಾಲಿಕೆ | 4200 |
| | | ಅರಸಿಕೇರೆ ನಗರಸಭೆ | 254 |
| 16 | ಹಾವೇರಿ | ಹಾವೇರಿ ನಗರಸಭೆ | 596 |
| | | ರಾಣೆಬೆನ್ನೂರು ನಗರಸಭೆ | 2872 |
| | | ನಗರಸಭೆ ಅರಸೀಕೆರೆ | 254 |
| 17 | ಕಲಬುರಗಿ | ಕಲಬುರ್ಗಿ ಮಹಾನಗರ ಪಾಲಿಕೆ | 17120 |
| | | ಶಹಾಪುರ ನಗರಸಭೆ | 835 |
| | | ಸೇಡಂ ನಗರಸಭೆ | 4760 |
| 18 | ಕೊಡಗು | ಮಡಿಕೇರಿ ನಗರಸಭೆ | 00 |
| 19 | ಕೋಲಾರ | ಕೋಲಾರ ನಗರಸಭೆ | 9930 |
| | | ಮುಳಬಾಗಿಲು ನಗರಸಭೆ | 3503 |
| | | ಬಂಗಾರಪೇಟೆ ನಗರಸಭೆ | 2206 |
| | | ಮಾಲೂರು ನಗರಸಭೆ | 2252 |
| | | ಕೆ.ಜಿ.ಎಫ್. ನಗರಸಭೆ | 3772 |
| 20 | ಕೊಪ್ಪಳ | ಕೊಪ್ಪಳ ನಗರಸಭೆ | 8135 |
| | | ಗಂಗಾವತಿ ನಗರಸಭೆ | 5189 |
| 21 | ಮಂಡ್ಯ | ಮಂಡ್ಯ ನಗರಸಭೆ | 1686 |
| | | ಮದ್ದೂರು ನಗರಸಭೆ | 1889 |
| 22 | ಮೈಸೂರು | ಮೈಸೂರು ಮನಪಾ | - |
| | | ನಂಜನಗೂಡು ನಗರಸಭೆ | 7022 |
| | | ಹುಣಸೂರು ನಗರಸಭೆ | 8159 |
| | | ಹೂಟಗಹಳ್ಳಿ ನಗರಸಭೆ | 19064 |
| 23 | ರಾಯಚೂರು | ರಾಯಚೂರು ಮನಪಾ | 4590 |
| | | ಸಿಂಧನೂರು ನಗರಸಭೆ | 7068 |
| 24 | ಬೆಂಗಳೂರು ದಕ್ಷಿಣ(ರಾಮನಗರ) | ರಾಮನಗರ | 5637 |
| | | ಚನ್ನಪಟ್ಟಣ | 7587 |
| | | ಕನಕಪುರ | 1927 |
| 25 | ಶಿವಮೊಗ್ಗ | ಮಹಾನಗರ ಪಾಲಿಕೆ ಶಿವಮೊಗ್ | 11310 |
| | | ನಗರಸಭೆ ಭದ್ರಾವತಿ | 4799 |
| | | ನಗರಸಭೆ ಸಾಗರ | 1583 |

| | | | |
|---|---|---|---|
| 26 | ತುಮಕೂರು | ತುಮಕೂರು ಮನಪಾ | 13240 |
| | | ತಿಪಟೂರು ನಗರಸಭೆ | 6388 |
| | | ಶಿರಾ ನಗರಸಭೆ | 9343 |
| 27 | ಉಡುಪಿ | ಉಡುಪಿ ನಗರಸಭೆ | 1646 |
| 28 | ಉತ್ತರ ಕನ್ನಡ | ಭಟ್ಕಳ | 1123 |
| | | ದಾಂಡೇಲಿ | 8025 |
| | | ಕಾರವಾರ | 2315 |
| | | ಸಿರ್ಸಿ | 2878 |
| 29 | ವಿಜಯಪುರ | ಮಹಾನಗರ ಪಾಲಿಕೆ ವಿಜಯಪುರ | 4507 |
| | | ನಗರಸಭೆ ಇಂಡಿ | 127 |
| | | ನಗರಸಭೆ ಸಿಂಧಗಿ | 306 |
| 30 | ವಿಜಯನಗರ | ಹೊಸಪೇಟೆ ನಗರಸಭೆ | 3843 |
| | | ಹರಪನಹಳ್ಳಿ ನಗರಸಭೆ | 800 |
| 31 | ಯಾದಗಿರಿ | ನಗರಸಭೆ ಯಾದಗಿರಿ | 2565 |
| | | ನಗರಸಭೆ ಶಹಾಪುರ | 9283 |
| | | ನಗರಸಭೆ ಸುರಪುರ | 948 |
| ಒಟ್ಟು | | | 4,84,167 |

ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

## ಅನುಬಂಧ-2

## ರಾಜ್ಯದಲ್ಲಿ ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯ ಅನಧಿಕೃತವಾಗಿ ನಿರ್ಮಾಣ ಮಾಡಿದ ಕಟ್ಟಡಗಳಿಗೆ ಬಿ ಖಾತೆ ನೀಡಿದ ವಿವರ

| ಕ್ರ.ಸಂ | ಜಿಲ್ಲೆಗಳ ಹೆಸರು | | ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯ ಅನಧಿಕೃತವಾಗಿ ನಿರ್ಮಾಣ ಮಾಡಿದ ಕಟ್ಟಡಗಳಿಗೆ ಬಿ ಖಾತೆ ನೀಡಿದ ವಿವರ | | |
|---|---|---|---|---|---|
| | | ನಗರಸಭೆ/ಮಹಾನಗರಸಭೆ ಹೆಸರು | ಅರ್ಜಿ ಸಲ್ಲಿಸಿರುವ ಸಂಖ್ಯೆ: | ಬಿ ಖಾತಾ ಪಡೆದಿರುವ ಸಂಖ್ಯೆ: | ವಿಲೇ ಮಾಡಿರುವ ಸಂಖ್ಯೆ: |
| 01 | ಬಾಗಲಕೋಟೆ | ಬಾಗಲಕೋಟೆ ನಗರಸಭೆ | 1890 | 1890 | 1890 |
| | | ರಬಕವಿ ಬನಹಟ್ಟಿ ನಗರಸಭೆ | 1128 | 1128 | 1128 |
| | | ಜಮಖಂಡಿ ನಗರಸಭೆ | 1967 | 1967 | 1967 |
| | | ಇಲಕಲ್ ನಗರಸಭೆ | 288 | 288 | 288 |
| | | ಮುಧೋಳ ನಗರಸಭೆ | 3276 | 3276 | 3276 |
| 02 | ಬಳ್ಳಾರಿ | ಮಹಾನಗರ ಪಾಲಿಕೆ ಬಳ್ಳಾರಿ | 24471 | 24471 | 24471 |
| | | ನಗರಸಭೆ ಶಿರಗುಪ್ಪ | 2415 | 2415 | 2415 |
| 03 | ಬೆಳಗಾವಿ | ಬೆಳಗಾವಿ ಮಹಾನಗರ ಪಾಲಿಕೆ | 7268 | 6668 | 6668 |
| | | ನಿಪ್ಪಾಣಿ ನಗರಸಭೆ | 353 | 353 | 353 |
| | | ಸವದತ್ತಿ ನಗರಸಭೆ | 362 | 362 | 362 |
| | | ಬೈಲಹೊಂಗಲ ನಗರಸಭೆ | 3510 | 3481 | 3481 |
| | | ಗೋಕಾಕ ನಗರಸಭೆ | 462 | 462 | 462 |
| 04 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರನಗರಸಭೆ | 6929 | 6929 | 6929 |
| | | ಹೊಸಕೋಟೆ ನಗರಸಭೆ | 8690 | 8690 | 8690 |
| | | ನೆಲಮಂಗಲ ನಗರಸಭೆ | 12101 | 12101 | 12101 |
| 05 | ಬೆಂಗಳೂರು ನಗರ | ಮಾದನಾಯಕನಹಳ್ಳಿ ನಗರಸಭೆ | 26894 | 26894 | 26894 |
| | | ಹೆಬ್ಬಗೋಡಿ ನಗರಸಭೆ | 5013 | 5013 | 5013 |
| 06 | ಬೀದರ್ | ಮಹಾನಗರ ಪಾಲಿಕೆ ಬೀದರ | 6214 | 4667 | 6214 |
| | | ಬಸವಕಲ್ಯಾಣ ನಗರಸಭೆ | 1983 | 1862 | 1862 |
| 07 | ಚಾಮರಾಜನಗರ | ನಗರಸಭೆ ಚಾಮರಾಜನಗರ | 1340 | 1275 | 1275 |
| | | ಕೊಳ್ಳೇಗಾಲ ನಗರಸಭೆ | 1564 | 1312 | 1312 |
| 08 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ನಗರಸಭೆ | 3316 | 2814 | 3316 |
| | | ಚಿಂತಾಮಣಿ ನಗರಸಭೆ | 4892 | 4286 | 4892 |
| | | ಶಿಡ್ಲಘಟ್ಟ ನಗರಸಭೆ | 5850 | 3918 | 5850 |
| | | ಗೌರಿಬಿದನೂರು ನಗರಸಭೆ | 2196 | 2196 | 2196 |
| 09 | ಚಿಕ್ಕಮಗಳೂರು | ಚಿಕ್ಕಮಗಳೂರು ನಗರಸಭೆ | 1327 | 1133 | 1133 |

| | | | | | |
|---|---|---|---|---|---|
| 10 | ಚಿತ್ರದುರ್ಗ | ಚಿತ್ರದುರ್ಗ ನಗರಸಭೆ | 1776 | 1776 | 1776 |
| | | ಚಳ್ಳಕೆರೆ ನಗರಸಭೆ | 260 | 217 | 217 |
| | | ಹಿರಿಯೂರು ನಗರಸಭೆ | 743 | 743 | 743 |
| 11 | ದಕ್ಷಿಣ ಕನ್ನಡ | ಮಂಗಳೂರು ಮನಪಾ | 1401 | 1401 | 1401 |
| | | ಪುತ್ತೂರು ನಗರಸಭೆ | 571 | 571 | 571 |
| | | ಉಳ್ಳಾಲ ನಗರಸಭೆ | 107 | 107 | 107 |
| 12 | ದಾವಣಗೆರೆ | ದಾವಣಗೆರೆ ಮಹಾನಗರಪಾಲಿಕೆ | 15296 | 15249 | 15249 |
| | | ಹರಿಹರ ನಗರಸಭೆ | 3605 | 3311 | 3311 |
| 13 | ಧಾರವಾಡ | ಹು-ಧಾ ಮಹಾನಗರ ಪಾಲಿಕೆ | 43153 | 4253 | 3192 |
| 14 | ಗದಗ | ಗದಗ -ಬೆಟಗೇರಿ ನಗರಸಭೆ | 181 | 181 | 181 |
| 15 | ಹಾಸನ | ಹಾಸನ ಮಹಾನಗರ ಪಾಲಿಕೆ | 3048 | 3300 | 3048 |
| | | ಅರಸಿಕೇರೆ ನಗರಸಭೆ | 254 | 254 | 254 |
| 16 | ಹಾವೇರಿ | ಹಾವೇರಿ ನಗರಸಭೆ | 217 | 217 | 217 |
| | | ರಾಣಿಬೆನ್ನೂರು ನಗರಸಭೆ | 2026 | 2026 | 2026 |
| | | ನಗರಸಭೆ ಅರಸೀಕೆರೆ | 254 | 254 | 254 |
| 17 | ಕಲಬುರಗಿ | ಕಲಬುರ್ಗಿ ಮಹಾನಗರ ಪಾಲಿಕೆ | 13176 | 11515 | 11515 |
| | | ಶಹಾಪುರ ನಗರಸಭೆ | 465 | 415 | 465 |
| | | ಸೇಡಂ ನಗರಸಭೆ | 1138 | 1048 | 1138 |
| 18 | ಕೊಡಗು | ಮಡಿಕೇರಿ ನಗರಸಭೆ | 35 | 35 | 35 |
| 19 | ಕೋಲಾರ | ಕೋಲಾರ ನಗರಸಭೆ | 978 | 932 | 932 |
| | | ಮುಳಬಾಗಿಲು ನಗರಸಭೆ | 1122 | 1078 | 1078 |
| | | ಬಂಗಾರಪೇಟೆ ನಗರಸಭೆ | 754 | 738 | 754 |
| | | ಮಾಲೂರು ನಗರಸಭೆ | 3346 | 3384 | 3346 |
| | | ಕೆ.ಜಿ.ಎಫ್. ನಗರಸಭೆ | 152 | 152 | 152 |
| 20 | ಕೊಪ್ಪಳ | ಕೊಪ್ಪಳ ನಗರಸಭೆ | 1916 | 1903 | 1903 |
| | | ಗಂಗಾವತಿ ನಗರಸಭೆ | 353 | 276 | 276 |
| 21 | ಮಂಡ್ಯ | ಮಂಡ್ಯ ನಗರಸಭೆ | 1640 | 1640 | 1640 |
| | | ಮದ್ದೂರು ನಗರಸಭೆ | 1908 | 1908 | 1908 |
| 22 | ಮೈಸೂರು | ಮೈಸೂರು ಮನಪಾ | 5699 | 5699 | 5699 |
| | | ನಂಜನಗೂಡು ನಗರಸಭೆ | 4156 | 3654 | 4156 |
| | | ಹುಣಸೂರು ನಗರಸಭೆ | 4250 | 3839 | 4250 |
| | | ಹೂಟಗಹಳ್ಳಿ ನಗರಸಭೆ | 4963 | 4610 | 4963 |
| 23 | ರಾಯಚೂರು | ರಾಯಚೂರು ಮನಪಾ | 2449 | 2449 | 2449 |
| | | ಸಿಂಧನೂರು ನಗರಸಭೆ | 1863 | 1863 | 1863 |
| 24 | ಬೆಂಗಳೂರು ದಕ್ಷಿಣ(ರಾಮನಗರ) | ರಾಮನಗರ | 2675 | 2612 | 2612 |
| | | ಚನ್ನಪಟ್ಟಣ | 2155 | 2018 | 2018 |
| | | ಕನಕಪುರ | 1428 | 1083 | 1083 |
| 25 | ಶಿವಮೊಗ್ಗ | ಮಹಾನಗರ ಪಾಲಿಕೆ ಶಿವಮೊಗ್ | 7929 | 5270 | 7929 |
| | | ನಗರಸಭೆ ಭದ್ರಾವತಿ | 1632 | 1618 | 1618 |
| | | ನಗರಸಭೆ ಸಾಗರ | 1583 | 1516 | 1583 |

# ಅನುಬಂಧ-2

## ರಾಜ್ಯದಲ್ಲಿ ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯ ಅನಧಿಕೃತವಾಗಿ ನಿರ್ಮಾಣ ಮಾಡಿದ ಕಟ್ಟಡಗಳಿಗೆ ಬಿ ಖಾತೆ ನೀಡಿದ ವಿವರ

| ಕ್ರ.ಸಂ | ಜಿಲ್ಲೆಗಳ ಹೆಸರು | | ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯ ಅನಧಿಕೃತವಾಗಿ ನಿರ್ಮಾಣ ಮಾಡಿದ ಕಟ್ಟಡಗಳಿಗೆ ಬಿ ಖಾತೆ ನೀಡಿದ ವಿವರ | | |
|---|---|---|---|---|---|
| | | ನಗರಸಭೆ/ಮಹಾನಗರಸಭೆ ಹೆಸರು | ಅರ್ಜಿ ಸಲ್ಲಿಸಿರುವ ಸಂಖ್ಯೆ: | ಬಿ ಖಾತಾ ಪಡೆದಿರುವ ಸಂಖ್ಯೆ: | ವಿಲೇ ಮಾಡಿರುವ ಸಂಖ್ಯೆ: |
| 01 | ಬಾಗಲಕೋಟೆ | ಬಾಗಲಕೋಟೆ ನಗರಸಭೆ | 1890 | 1890 | 1890 |
| | | ರಬಕವಿ ಬನಹಟ್ಟಿ ನಗರಸಭೆ | 1128 | 1128 | 1128 |
| | | ಜಮಖಂಡಿ ನಗರಸಭೆ | 1967 | 1967 | 1967 |
| | | ಇಲಕಲ್ ನಗರಸಭೆ | 288 | 288 | 288 |
| | | ಮುಧೋಳ ನಗರಸಭೆ | 3276 | 3276 | 3276 |
| 02 | ಬಳ್ಳಾರಿ | ಮಹಾನಗರ ಪಾಲಿಕೆ ಬಳ್ಳಾರಿ | 24471 | 24471 | 24471 |
| | | ನಗರಸಭೆ ಶಿರಗುಪ್ಪ | 2415 | 2415 | 2415 |
| 03 | ಬೆಳಗಾವಿ | ಬೆಳಗಾವಿ ಮಹಾನಗರ ಪಾಲಿಕೆ | 7268 | 6668 | 6668 |
| | | ನಿಪ್ಪಾಣಿ ನಗರಸಭೆ | 353 | 353 | 353 |
| | | ಸವದತ್ತಿ ನಗರಸಭೆ | 362 | 362 | 362 |
| | | ಬೈಲಹೊಂಗಲ ನಗರಸಭೆ | 3510 | 3481 | 3481 |
| | | ಗೋಕಾಕ ನಗರಸಭೆ | 462 | 462 | 462 |
| 04 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರನಗರಸಭೆ | 6929 | 6929 | 6929 |
| | | ಹೊಸಕೋಟೆ ನಗರಸಭೆ | 8690 | 8690 | 8690 |
| | | ನೆಲಮಂಗಲ ನಗರಸಭೆ | 12101 | 12101 | 12101 |
| 05 | ಬೆಂಗಳೂರು ನಗರ | ಮಾದನಾಯಕನಹಳ್ಳಿ ನಗರಸಭೆ | 26894 | 26894 | 26894 |
| | | ಹೆಬ್ಬಗೋಡಿ ನಗರಸಭೆ | 5013 | 5013 | 5013 |
| 06 | ಬೀದರ್ | ಮಹಾನಗರ ಪಾಲಿಕೆ ಬೀದರ | 6214 | 4667 | 6214 |
| | | ಬಸವಕಲ್ಯಾಣ ನಗರಸಭೆ | 1983 | 1862 | 1862 |
| 07 | ಚಾಮರಾಜನಗರ | ನಗರಸಭೆ ಚಾಮರಾಜನಗರ | 1340 | 1275 | 1275 |
| | | ಕೊಳ್ಳೇಗಾಲ ನಗರಸಭೆ | 1564 | 1312 | 1312 |
| 08 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ನಗರಸಭೆ | 3316 | 2814 | 3316 |
| | | ಚಿಂತಾಮಣಿ ನಗರಸಭೆ | 4892 | 4286 | 4892 |
| | | ಶಿಡ್ಲಘಟ್ಟ ನಗರಸಭೆ | 5850 | 3918 | 5850 |
| | | ಗೌರಿಬಿದನೂರು ನಗರಸಭೆ | 2196 | 2196 | 2196 |
| 09 | ಚಿಕ್ಕಮಗಳೂರು | ಚಿಕ್ಕಮಗಳೂರು ನಗರಸಭೆ | 1327 | 1133 | 1133 |

| | | | | | |
|---|---|---|---|---|---|
| 10 | ಚಿತ್ರದುರ್ಗ | ಚಿತ್ರದುರ್ಗ ನಗರಸಭೆ | 1776 | 1776 | 1776 |
| | | ಚಳ್ಳಕೆರೆ ನಗರಸಭೆ | 260 | 217 | 217 |
| | | ಹಿರಿಯೂರು ನಗರಸಭೆ | 743 | 743 | 743 |
| 11 | ದಕ್ಷಿಣ ಕನ್ನಡ | ಮಂಗಳೂರು ಮನಪಾ | 1401 | 1401 | 1401 |
| | | ಪುತ್ತೂರು ನಗರಸಭೆ | 571 | 571 | 571 |
| | | ಉಳ್ಳಾಲ ನಗರಸಭೆ | 107 | 107 | 107 |
| 12 | ದಾವಣಗೆರೆ | ದಾವಣಗೆರೆ ಮಹಾನಗರಪಾಲಿಕೆ | 15296 | 15249 | 15249 |
| | | ಹರಿಹರ ನಗರಸಭೆ | 3605 | 3311 | 3311 |
| 13 | ಧಾರವಾಡ | ಹು-ಧಾ ಮಹಾನಗರ ಪಾಲಿಕೆ | 43153 | 4253 | 3192 |
| 14 | ಗದಗ | ಗದಗ –ಬೆಟಗೇರಿ ನಗರಸಭೆ | 181 | 181 | 181 |
| 15 | ಹಾಸನ | ಹಾಸನ ಮಹಾನಗರ ಪಾಲಿಕೆ | 3048 | 3300 | 3048 |
| | | ಅರಸಿಕೇರೆ ನಗರಸಭೆ | 254 | 254 | 254 |
| 16 | ಹಾವೇರಿ | ಹಾವೇರಿ ನಗರಸಭೆ | 217 | 217 | 217 |
| | | ರಾಣೆಬೆನ್ನೂರು ನಗರಸಭೆ | 2026 | 2026 | 2026 |
| | | ನಗರಸಭೆ ಅರಸೀಕೆರೆ | 254 | 254 | 254 |
| 17 | ಕಲಬುರಗಿ | ಕಲಬುರ್ಗಿ ಮಹಾನಗರ ಪಾಲಿಕೆ | 13176 | 11515 | 11515 |
| | | ಶಹಾಪುರ ನಗರಸಭೆ | 465 | 415 | 465 |
| | | ಸೇಡಂ ನಗರಸಭೆ | 1138 | 1048 | 1138 |
| 18 | ಕೊಡಗು | ಮಡಿಕೇರಿ ನಗರಸಭೆ | 35 | 35 | 35 |
| 19 | ಕೋಲಾರ | ಕೋಲಾರ ನಗರಸಭೆ | 978 | 932 | 932 |
| | | ಮುಳಬಾಗಿಲು ನಗರಸಭೆ | 1122 | 1078 | 1078 |
| | | ಬಂಗಾರಪೇಟೆ ನಗರಸಭೆ | 754 | 738 | 754 |
| | | ಮಾಲೂರು ನಗರಸಭೆ | 3346 | 3384 | 3346 |
| | | ಕೆ.ಜಿ.ಎಫ್. ನಗರಸಭೆ | 152 | 152 | 152 |
| 20 | ಕೊಪ್ಪಳ | ಕೊಪ್ಪಳ ನಗರಸಭೆ | 1916 | 1903 | 1903 |
| | | ಗಂಗಾವತಿ ನಗರಸಭೆ | 353 | 276 | 276 |
| 21 | ಮಂಡ್ಯ | ಮಂಡ್ಯ ನಗರಸಭೆ | 1640 | 1640 | 1640 |
| | | ಮದ್ದೂರು ನಗರಸಭೆ | 1908 | 1908 | 1908 |
| 22 | ಮೈಸೂರು | ಮೈಸೂರು ಮನಪಾ | 5699 | 5699 | 5699 |
| | | ನಂಜನಗೂಡು ನಗರಸಭೆ | 4156 | 3654 | 4156 |
| | | ಹುಣಸೂರು ನಗರಸಭೆ | 4250 | 3839 | 4250 |
| | | ಹೂಟಗಹಳ್ಳಿ ನಗರಸಭೆ | 4963 | 4610 | 4963 |
| 23 | ರಾಯಚೂರು | ರಾಯಚೂರು ಮನಪಾ | 2449 | 2449 | 2449 |
| | | ಸಿಂಧನೂರು ನಗರಸಭೆ | 1863 | 1863 | 1863 |
| 24 | ಬೆಂಗಳೂರು ದಕ್ಷಿಣ(ರಾಮನಗರ) | ರಾಮನಗರ | 2675 | 2612 | 2612 |
| | | ಚನ್ನಪಟ್ಟಣ | 2155 | 2018 | 2018 |
| | | ಕನಕಪುರ | 1428 | 1083 | 1083 |
| 25 | ಶಿವಮೊಗ್ಗ | ಮಹಾನಗರ ಪಾಲಿಕೆ ಶಿವಮೊಗ್ | 7929 | 5270 | 7929 |
| | | ನಗರಸಭೆ ಭದ್ರಾವತಿ | 1632 | 1618 | 1618 |
| | | ನಗರಸಭೆ ಸಾಗರ | 1583 | 1516 | 1583 |

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ರಚಿಸಿರುವ ಬಡಾವಣೆಗಳಲ್ಲಿನ ಬಿ-ಖಾತಾ ನಿವೇಶನ / ಕಟ್ಟಡ / ಅಪಾರ್ಟ್‌ಮೆಂಟ್ / ಫ್ಲಾಟ್‌ಗಳಿಗೆ ಎ-ಖಾತಾ ನೀಡುವ ಬಗ್ಗೆ.

**ಓದಲಾಗಿದೆ:** ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಏಕ ಕಡತ ಸಂಖ್ಯೆ: 1832535 DMA/DEV/GPS/2/2025.

*****

**ಪ್ರಸ್ತಾವನೆ:**

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಅನ್ನು ಉಲ್ಲಂಘಿಸಿ, ಅನಧಿಕೃತವಾಗಿ ಬಡಾವಣೆಗಳನ್ನು ರಚಿಸಿ, ನಿವೇಶನಗಳನ್ನು ಮಾರಾಟ ಮಾಡಲಾಗಿರುತ್ತದೆ. ಅನಧಿಕೃತ ಬಡಾವಣೆಗಳ ರಚನೆಯಿಂದ ನಗರ ಪ್ರದೇಶಗಳಲ್ಲಿ ಭೂ ಪರಿವರ್ತಿಸಿದ / ಭೂ ಪರಿವರ್ತಿಸದ ಜಮೀನುಗಳಿಗೆ ವಿನ್ಯಾಸ ಅನುಮೋದನೆ ಪಡೆಯದೇ ಅನಧಿಕೃತ ಬಡಾವಣೆ / ರೆವೆನ್ಯೂ ಬಡಾವಣೆಗಳನ್ನು ನಿರ್ಮಾಣ ಮಾಡಿ, ನಿವೇಶನಗಳನ್ನು ನೋಂದಣಿ ಮಾಡಿಕೊಂಡು ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಿಸುವುದರಿಂದಾಗುವ ಪ್ರತಿಕೂಲ ಪರಿಣಾಮಗಳನ್ನು ಗಮನಿಸಲಾಗಿ, ನಗರ ಪ್ರದೇಶಗಳಲ್ಲಿ ಉದ್ಯಾನವನ / ಬಯಲುಜಾಗಗಳ ಕೊರತೆ, ನಾಗರೀಕ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ವಿಫಲತೆ, ವ್ಯವಸ್ಥಿತವಾದ ರಸ್ತೆಯ ಪರಿಚಲನೆ, ಮೂಲಭೂತ ಸೌಕರ್ಯದ ಕೊರತೆ ಹಾಗೂ ಯೋಜಿತ ಬೆಳವಣಿಗೆಗಳಲ್ಲಿ ತೊಡಕುಗಳಿರುವುದು ಕಂಡು ಬರುತ್ತದೆ. ಈಗಾಗಲೇ ಅನಧಿಕೃತವಾಗಿ ರಚಿತವಾಗಿರುವ ಬಡಾವಣೆಗಳಲ್ಲಿರುವ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976ಕ್ಕೆ ತಿದ್ದುಪಡಿ ತಂದು, ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೇ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ದಿನಾಂಕ 10-09-2024ರ ಪೂರ್ವದಲ್ಲಿ ರಚಿಸಲಾಗಿರುವ ಬಡಾವಣೆಗಳಲ್ಲಿನ ಸ್ವತ್ತುಗಳಿಗೆ ಬಿ-ಖಾತಾ (ಅನಧಿಕೃತ) ನೀಡಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಕಾಯ್ದೆ ತಿದ್ದುಪಡಿಯಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸಕ್ಷಮ ಪ್ರಾಧಿಕಾರದ ಅನುಮೋದನೆ ಇರದ ಸ್ವತ್ತುಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಿ, ಅಂತಹ ಆಸ್ತಿಗಳನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಿರ್ವಹಿಸಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಂದಾಜು 10 ಲಕ್ಷ ಈ ರೀತಿಯ ಆಸ್ತಿಗಳಿರುತ್ತವೆ. ಸದರಿ ಆಸ್ತಿಗಳಿಗೆ ನಗರ ಸ್ಥಳೀಯ ಸಂಸ್ಥೆಗಳಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುತ್ತಿರುವುದಿಲ್ಲ ಮತ್ತು ಈಗಾಗಲೇ ಕಟ್ಟಡ ಪರವಾನಿಗೆ ಪಡೆಯದೇ ನಿರ್ಮಾಣ ಮಾಡಿರುವ ಸ್ವತ್ತುಗಳಿಗೆ ಹೆಚ್ಚುವರಿ ನಿರ್ಮಾಣ ಅಥವಾ ಮರು ನಿರ್ಮಾಣ / ನೆಲಸಮಗೊಳಿಸಲು ಅನುಮತಿ ನೀಡುತ್ತಿರುವುದಿಲ್ಲ. ಈ ರೀತಿಯ ಸ್ವತ್ತುಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವ್ಯಾಪ್ತಿಯಿಂದ ಹೊರಗುಳಿದಿರುತ್ತವೆ. ಅನುಮೋದನೆ ಪಡೆಯದ ಬಡಾವಣೆಗಳಲ್ಲಿ ಸ್ವತ್ತುಗಳಿಗೆ ರಸ್ತೆ, ಚರಂಡಿ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ವಾಸ್ತವವಾಗಿ ನೀಡಲಾಗುತ್ತಿದ್ದು, ಸದರಿ ಆಸ್ತಿಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅನುಬಂಧಗಳಿಗನುಸಾರವಾಗಿ ನಿಯಂತ್ರಣಕ್ಕೊಳಪಡಿಸುವ ಅವಶ್ಯಕತೆಯಿರುತ್ತದೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರಚಿತವಾಗಿರುವ ಅನಧಿಕೃತ ಬಡಾವಣೆಗಳಲ್ಲಿನ ಸ್ವತ್ತುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಉಪಬಂಧಗಳ ವ್ಯಾಪ್ತಿಗೆ ತಂದು ನಿಯಂತ್ರಿಸುವ ಕುರಿತು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ಬಿ-ಖಾತಾ ಹೊಂದಿರುವ ಸ್ವತ್ತುಗಳಿಗೆ ಎ-ಖಾತಾ ನೀಡಲು ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿರುತ್ತದೆ.

1. <u>ನಗರ ಸ್ಥಳೀಯ ಸಂಸ್ಥೆಗಳಿಂದ ಈಗಾಗಲೇ ಬಿ-ಖಾತಾ ನೀಡಿ, ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿರುವ ಖಾಲಿ ನಿವೇಶನಗಳು:</u>

ಬಿ-ಖಾತಾ ಹೊಂದಿರುವ ನಿವೇಶನಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ನಿಯಂತ್ರಿಸುವ ತುರ್ತು ಅವಶ್ಯಕತೆಯಿದೆ. ಪ್ರಸ್ತುತ ಅಂತಹ ಬಿ-ಖಾತಾಗಳಲ್ಲಿನ ನಿರ್ಮಾಣಗಳಿಗೆ ಯಾವುದೇ ಕಟ್ಟಡ ನಕ್ಷೆ ಅನುಮೋದನೆಯನ್ನು ನೀಡಲಾಗುವುದಿಲ್ಲ. ಇದು ಅನಿಯಂತ್ರಿತ ನಿರ್ಮಾಣಗಳಿಗೆ ಕಾರಣವಾಗುತ್ತದೆ. ಆದ್ದರಿಂದ, ಅಂತಹ ಸಂದರ್ಭಗಳಲ್ಲಿ ಈ ಕೆಳಗಿನ ಕ್ರಮಗಳನ್ನು ಅನ್ವಯಿಸಬಹುದು.

i. ಖಾಲಿ ನಿವೇಶನಕ್ಕೆ ಸಂಪರ್ಕಿಸುವ ಸಾರ್ವಜನಿಕ ರಸ್ತೆ ಇದೆ ಎಂದು ಖಚಿತಪಡಿಸಿಕೊಳ್ಳಬೇಕು. ಅಂತಹ ಖಾಲಿ ನಿವೇಶನ ಅಥವಾ ಭೂಮಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸಬೇಕಾಗುತ್ತದೆ.

ii. ಸದರಿ ನಿವೇಶನವು ಭೂ ಪರಿವರ್ತನೆಯಾಗದ ಜಮೀನು ಇದ್ದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಬೇಕು ಅಥವಾ ಕಲಂ 95 ರ ತಿದ್ದುಪಡಿಯಂತೆ ಅನುಮೋದಿತ ಮಾಸ್ಟರ್ ಪ್ಲಾನ್ ವ್ಯಾಪ್ತಿಗೆ ಭೂಮಿ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್ ನಲ್ಲಿ ಸೂಚಿಸಲಾದ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕಲಂ 95(7) ಕರ್ನಾಟಕ ಭೂಕಂದಾಯ ಕಾಯ್ದೆ ಅಡಿಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಕೆಟಿಸಿಪಿ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಅನುಮೋದನೆ ಪಡೆಯುವಾಗ ಪ್ರಾಧಿಕಾರಕ್ಕೆ ಪಾವತಿಸಬೇಕಾಗುತ್ತದೆ.

iii. ಭೂಪರಿವರ್ತನೆ ನಂತರದಲ್ಲಿ ಅಂತಹ ಖಾಲಿ ನಿವೇಶನಕ್ಕೆ ಕೆಟಿಸಿಪಿ ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ಪಡೆಯಬೇಕಾಗುತ್ತದೆ.

iv. ವಿನ್ಯಾಸ ಅನುಮೋದನೆ ಪಡೆದ ನಂತರ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರಕಲಂ 112 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕೃತ (ಎ-ಖಾತಾ) ಖಾತಾ ನೀಡಬಹುದು.

2. <u>ನಗರ ಸ್ಥಳೀಯ ಸಂಸ್ಥೆಗಳಿಂದ ಈಗಾಗಲೇ ಬಿ-ಖಾತಾ ಪಡೆದು ಅಥವಾ ಪಡೆಯದೆ ಪರವಾನಿಗೆ ಇಲ್ಲದೇ ನಿರ್ಮಾಣ ಮಾಡಲಾದ ಕಟ್ಟಡಗಳು:</u>

i. ಕಟ್ಟಡ ನಿರ್ಮಾಣ ಮಾಡಿರುವ ನಿವೇಶನಕ್ಕೆ ಸಂಪರ್ಕಿಸಲು ಸಾರ್ವಜನಿಕ ರಸ್ತೆ ಇರುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ಅಂತಹ ಆಸ್ತಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ

| | | | | | |
|---|---|---|---|---|---|
| 26 | ತುಮಕೂರು | ತುಮಕೂರು ಮನಪಾ | 9733 | 9648 | 9648 |
| | | ತಿಪಟೂರು ನಗರಸಭೆ | 2946 | 2938 | 2946 |
| | | ಶಿರಾ ನಗರಸಭೆ | 3048 | 3165 | 3048 |
| 27 | ಉಡುಪಿ | ಉಡುಪಿ ನಗರಸಭೆ | 1498 | 1200 | 1498 |
| 28 | ಉತ್ತರ ಕನ್ನಡ | ಭಟ್ಕಳ | 590 | 590 | 590 |
| | | ದಾಂಡೇಲಿ | | | |
| | | ಕಾರವಾರ | | | |
| | | ಸಿರ್ಸಿ | | | |
| 29 | ವಿಜಯಪುರ | ಮಹಾನಗರ ಪಾಲಿಕೆ ವಿಜಯಪುರ | 3850 | 3720 | 3850 |
| | | ನಗರಸಭೆ ಇಂಡಿ | 402 | 206 | 402 |
| | | ನಗರಸಭೆ ಸಿಂಧಗಿ | 325 | 306 | 306 |
| 30 | ವಿಜಯನಗರ | ಹೊಸಪೇಟೆ ನಗರಸಭೆ | 3843 | 3843 | 3843 |
| | | ಹರಪನಹಳ್ಳಿ ನಗರಸಭೆ | 745 | 659 | 732 |
| 31 | ಯಾದಗಿರಿ | ನಗರಸಭೆ ಯಾದಗಿರಿ | 2565 | 2515 | 2515 |
| | | ನಗರಸಭೆ ಶಹಾಪುರ | 3305 | 3305 | 3305 |
| | | ನಗರಸಭೆ ಸುರಪುರ | 948 | 948 | 948 |
| ಒಟ್ಟು | | | 310154 | 258009 | 265981 |

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಪೌರನಿಗಮಗಳ ಕಾಯ್ದೆ 1976 ರ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸಬೇಕಾಗುತ್ತದೆ.

ii. ಸದರಿ ಆಸ್ತಿ ಭೂಪರಿವರ್ತನೆ ಆಗದ ಜಮೀನಿನ ವ್ಯಾಪ್ತಿಯಲ್ಲಿ ಇದ್ದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸುವುದು. ಕಾಯ್ದೆಯ ಕಲಂ 95 ರ ತಿದ್ದುಪಡಿಯಂತೆ ಭೂಮಿ ನಗರ ಸ್ಥಳೀಯ ಸಂಸ್ಥೆಗಳ ಅನುಮೋದಿತ ಪರಿಷ್ಕೃತ ಮಾಸ್ಟರ್ ಪ್ಲಾನ್ ವ್ಯಾಪ್ತಿಗೆ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್ ನಲ್ಲಿ ಸೂಚಿಸಿದಂತೆ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕರ್ನಾಟಕ ಭೂಕಂದಾಯ ಕಾಯ್ದೆಯ ಕಾಯ್ದೆ 95(7) ರಡಿಯಲ್ಲಿ ನಿಗಧಿಪಡಿಸಿದ ಶುಲ್ಕವನ್ನು ಕೆಟಿಸಿಪಿ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಅನುಮೋದನೆ ಪಡೆಯುವಾಗ ಪ್ರಾಧಿಕಾರಕ್ಕೆ ಪಾವತಿಸಬೇಕಾಗಿರುತ್ತದೆ.

iii. ಭೂಪರಿವರ್ತನೆ ಆದ ನಂತರದಲ್ಲಿ ಕಟ್ಟಡವಿರುವ ನಿವೇಶನಕ್ಕೆ KTCP ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ಪಡೆಯುವುದು.

iv. KTCP ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಸಂಬಂಧಿತ ಅನುಮೋದನೆಯನ್ನು ಪಡೆದ ನಂತರದಲ್ಲಿ, ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ಕಲಂ 112 ರಂತೆ ಎ-ಖಾತಾ ನೀಡಬಹುದಾಗಿದೆ.

v. ಅಸ್ತಿತ್ವದಲ್ಲಿರುವ ಕಟ್ಟಡವು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 187 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ಕಲಂ 300 ಅಥವಾ KTCP ಕಾಯ್ದೆ1961 ರಡಿಯಲ್ಲಿ ಅಥವಾ ಸದರಿ ಕಾಯ್ದೆಗಳಡಿ ಮಾಡಲಾದ ವಲಯ ನಿಯಮಗಳನ್ವಯ ಕಟ್ಟಡ ಪರವಾನಿಗೆ ನೀಡಲು ಅರ್ಹವಾಗಿದ್ದಲ್ಲಿ ಕಟ್ಟಡ ಪರವಾನಿಗೆ ನೀಡುವುದು ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವುದು.

vi. ಒಂದು ವೇಳೆ ಅಂತಹ ಕಟ್ಟಡವು ವಲಯ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ಸದರಿ ಕಟ್ಟಡಕ್ಕೆ "ವಲಯ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ನಿರ್ಮಾಣ ಮಾಡಲಾದ ಕಟ್ಟಡ" ಎಂದು ಷರಾ ದಾಖಲಿಸಿ ಬಿ-ಖಾತಾ ನೀಡುವುದು. ಕಟ್ಟಡಗಳನ್ನು ವಲಯ ನಿಮಾವಳಿಗಳಿಗೆ ಹಾಗೂ ಮಹಾಯೋಜನೆಗೆ ಅನುಗುಣವಾಗಿಸಲಾದಲ್ಲಿ ಅಂಥಹ ಪ್ರಕರಣಗಳಲ್ಲಿ ಎ-ಖಾತಾ ನೀಡಬಹುದಾಗಿದೆ.

3. **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ,1961 ಉಲ್ಲಂಘಿಸಿ ನಿರ್ಮಾಣ ಮಾಡಲಾದ Apartment / ಘಟಕಗಳು:**

i. ಅನುಮೋದನೆಯೊಂದಿಗೆ ನಿರ್ಮಿಸಲಾದ Apartment/ ಘಟಕಕ್ಕೆ ಸಂಪರ್ಕಿಸಲು ಸಾರ್ವಜನಿಕ ರಸ್ತೆ ಇರುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ಅಂತಹ ಆಸ್ತಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸಬೇಕಾಗುತ್ತದೆ.

ii. ಒಂದು ವೇಳೆ ಸದರಿ ಕಟ್ಟಡ / ಫ್ಲಾಟ್ ಗಳು ಇನ್ನೂ ಸಹ ಅಭಿವೃದ್ಧಿದಾರರು ಅಥವಾ ಮಾಲೀಕರ ಹೆಸರಿನಲ್ಲಿ ಇದ್ದಲ್ಲಿ,

a. ಸದರಿ ಆಸ್ತಿ ಭೂಪರಿವರ್ತನೆ ಆಗದ ಜಮೀನಿನ ವ್ಯಾಪ್ತಿಯಲ್ಲಿ ಇದ್ದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ

ಉದ್ದೇಶಕ್ಕಾಗಿ ಪರಿವರ್ತಿಸವುದು. ಸದರಿ ಕಾಯ್ದೆಯ ಕಲಂ 95 ರ ತಿದ್ದುಪಡಿಯಂತೆ ಭೂಮಿಯು ನಗರ ಸ್ಥಳೀಯ ಸಂಸ್ಥೆಗಳ ಅನುಮೋದಿತ ಪರಿಷ್ಕೃತ ಅನುಮೋದಿತ ಮಾಸ್ಟರ್-ಪ್ಲಾನ್ ವ್ಯಾಪ್ತಿಗೆ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್ ನಲ್ಲಿ ಸೂಚಿಸಿದಂತೆ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95(7) ರಡಿಯಲ್ಲಿ ನಿಗಧಿಪಡಿಸಿದ ಶುಲ್ಕವನ್ನು ಕೆಟಿಸಿಪಿ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಅನುಮೋದನೆ ಪಡೆಯುವಾಗ ಪ್ರಾಧಿಕಾರಕ್ಕೆ ಪಾವತಿಸಬೇಕಾಗಿರುತ್ತದೆ.

b. ಭೂಪರಿವರ್ತನೆ ಆದ ನಂತರದಲ್ಲಿ ಕಟ್ಟಡವಿರುವ ನಿವೇಶನಕ್ಕೆ KTCP ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ಪಡೆಯುವುದು.

c. ಅಸ್ತಿತ್ವದಲ್ಲಿರುವ ಕಟ್ಟಡವು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 187 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ಕಲಂ 300 ಅಥವಾ KTCP ಕಾಯ್ದೆ 1961 ರಡಿಯಲ್ಲಿ ಅಥವಾ ಸದರಿ ಕಾಯ್ದೆಗಳಡಿ ಮಾಡಲಾದ ನಿಯಮಗಳನ್ವಯ ಕಟ್ಟಡ ಪರವಾನಿಗೆ ನೀಡಲು ಅರ್ಹವಾಗಿದ್ದಲ್ಲಿ ಕಟ್ಟಡ ಪರವಾನಿಗೆ ನೀಡುವುದು. ನಂತರದಲ್ಲಿ ಸದರಿ ಫ್ಲಾಟ್ ಗಳಿಗೆ ಎ-ಖಾತಾ ನೀಡುವುದು.

d. ಒಂದು ವೇಳೆ ಅಂತಹ ಕಟ್ಟಡವು ವಲಯ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ಸದರಿ ಫ್ಲಾಟ್ ಗಳಿಗೆ ಬಿ-ಖಾತಾ ನೀಡುವುದು.

iii. ಒಂದು ವೇಳೆ ಬಹುಮಹಡಿ ಕಟ್ಟಡ / ಫ್ಲಾಟ್ ಗಳ ಮಾರಾಟವು ದಿನಾಂಕ:10-09-2024ರ ಪೂರ್ವದಲ್ಲಿ ಆಗಿದ್ದು ಸದರಿ ಫ್ಲಾಟ್ ಗಳಿಗೆ ಪ್ರಸ್ತುತ ಮಾಲೀಕರುಗಳು ಅರ್ಜಿ ಸಲ್ಲಿಸಿ ಬಿ-ಖಾತಾ ಪಡೆಯುವುದು. ಒಂದು ವೇಳೆ ಈಗಾಗಲೇ ಭೂಪರಿವರ್ತನೆಯಾಗಿದ್ದು, ಕ್ರಮ ಸಂಖ್ಯೆ ii ರಲ್ಲಿನ b ಮತ್ತು c ಅಂಶಗಳನ್ನು ಪೂರೈಸಿದ್ದಲ್ಲಿ ಎ-ಖಾತಾ ನೀಡುವುದು.

4. <u>**ಭೂ ಪರಿವರ್ತನೆ ಆಗದೇ ಕಂದಾಯ ಸರ್ವೆ ಸಂಖ್ಯೆ / ಹಿಸ್ಸಾ, ಸರ್ವೆ ಸಂಖ್ಯೆ ಹೊಂದಿರುವ ವಿಭಜನೆ ಮಾಡದೇ KTCP ಕಾಯ್ದೆ 1961 ರಡಿ ಅನುಮೋದನೆ ಪಡೆಯದಿರುವ ಖಾಲಿ ಭೂಮಿಗೆ ಖಾತಾ ನೀಡುವ ಪ್ರಕ್ರಿಯೆ:**</u>

ಕರ್ನಾಟಕ ಭೂಕಂದಾಯ ಕಾಯ್ದೆ, 1964 ರಡಿಯಲ್ಲಿ ಕಂದಾಯ ಸರ್ವೆ ಸಂಖ್ಯೆ ಅಥವಾ ಹಿಸ್ಸಾ ಸರ್ವೆ ಸಂಖ್ಯೆಯನ್ನು ಹೊಂದಿರುವ ಭೂಮಿಯು ಪರಿವರ್ತಿಸದ ಕೃಷಿ ಭೂಮಿಯಾಗಿದ್ದು, ಅಂತಹ ಜಾಗಕ್ಕೆ ಈ ಕೆಳಗಿನ ಕ್ರಮಗಳನ್ನು ಅನುಸರಿಸಿದ ನಂತರ ನಗರ ಸ್ಥಳೀಯ ಸಂಸ್ಥೆಗಳಿಂದ ಖಾತಾ ನೀಡಬಹುದು.

i. ಖಾಲಿ ನಿವೇಶನಕ್ಕೆ ಸಂಪರ್ಕಿಸುವ ರಸ್ತೆ ಇದೆ ಎಂದು ಖಚಿತಪಡಿಸಿಕೊಳ್ಳಬೇಕು. ಅಂತಹ ಖಾಲಿ ನಿವೇಶನ ಅಥವಾ ಭೂಮಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸಬೇಕಾಗುತ್ತದೆ.

ii. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಬೇಕು ಅಥವಾ ಕಲಂ 95 ರ ತಿದ್ದುಪಡಿಯಂತೆ ಅನುಮೋದಿತ ಮಾಸ್ಟರ್ ಪ್ಲಾನ್ ವ್ಯಾಪ್ತಿಗೆ ಭೂಮಿ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್ ನಲ್ಲಿ ಸೂಚಿಸಲಾದ ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯನ್ನು ಪರಿವರ್ತಿಸಲು ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ

95(7) ರಡಿಯಲ್ಲಿ ನಿಗಧಿಪಡಿಸಿದ ಶುಲ್ಕವನ್ನು ಕೆಟಿಸಿಪಿ ಕಾಯ್ದೆ 1961 ರಕಲಂ 17 ರಡಿಯಲ್ಲಿ ಅನುಮೋದನ ಪಡೆಯುವಾಗ ಪ್ರಾಧಿಕಾರಕ್ಕೆ ಪಾವತಿಸಬೇಕಾಗುತ್ತದೆ.

iii. ಭೂಪರಿವರ್ತನೆ ನಂತರದಲ್ಲಿ ಅಂತಹ ಖಾಲಿ ನಿವೇಶನಕ್ಕೆ ಕೆಟಿಸಿಪಿ ಕಾಯ್ದೆ 1961 ರಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ಪಡೆಯಬೇಕಾಗುತ್ತದೆ.

iv. ವಿನ್ಯಾಸ ಅನುಮೋದನ ಪಡೆದ ನಂತರ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರಕಲಂ 112 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕೃತ (ಎ-ಖಾತಾ) ಖಾತಾ ನೀಡಬಹುದು.

v. ಇಂಥಹ ಖಾಲಿ ಜಾಗಗಳಿಗೆ ಕರ್ನಾಟಕ ಭೂಕಂದಾಯ ಕಾಯ್ದೆ 1964, ಕೆಟಿಸಿಪಿ ಕಾಯ್ದೆ 1961, ಕರ್ನಾಟಕ ಪೌರಸಭೆಗಳ ಕಾಯ್ದೆ 1964 ಹಾಗೂ ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರಡಿ ಅಗತ್ಯವಿರುವ ಅನುಮೋದನೆಗಳನ್ನು ಪಡೆಯಲು ಅವಕಾಶವಿರುವುದರಿಂದ ಬಿ-ಖಾತಾ ನೀಡಲಾಗುವುದಿಲ್ಲ.

**5. <u>ಭೂಪರಿವರ್ತನೆಯಾದ ನಂತರದಲ್ಲಿ, ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದ ಖಾಲಿ ಭೂಮಿಯನ್ನು, ಉಪ-ವಿಭಾಗ ಮಾಡಿ ನೋಂದಾಯಿತ ಪತ್ರಗಳ ಮೂಲಕ ದಿನಾಂಕ 10-09-2024ರ ಪೂರ್ವದಲ್ಲಿ, ಮಾರಾಟ ಮಾಡಿದ ಪ್ರಕರಣಗಳು:</u>**

i. ಉಪ-ವಿಭಾಗ ಮಾಡಲಾದ ಖಾಲಿ ನಿವೇಶನಕ್ಕೆ ಸಂಪರ್ಕಿಸಲು ಸಾರ್ವಜನಿಕ ರಸ್ತೆ ಇರುವುದು ಕಡ್ಡಾಯವಾಗಿರುತ್ತದೆ. ಅಂತಹ ಖಾಲಿ ನಿವೇಶನಕ್ಕೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸಬೇಕಾಗುತ್ತದೆ.

ii. ಆನಂತರ, ಅಂತಹ ಖಾಲಿ ನಿವೇಶನವನ್ನು KTCP ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ.

iii. ವಿನ್ಯಾಸ ಅನುಮೋದನೆ ಪಡೆದ ನಂತರದಲ್ಲಿ, ಅಂತಹ ಉಪ-ವಿಭಜಿತ ಖಾಲಿ ನಿವೇಶನಕ್ಕೆ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 112 ರಂತೆ ಎ-ಖಾತಾ ನೀಡಬಹುದು.

**6. <u>ಭೂಪರಿವರ್ತನೆಯಾಗದೇ ಕಂದಾಯ ಭೂಮಿಯನ್ನು, ಅನಧಿಕೃತ ಉಪ-ವಿಭಾಗ ಮಾಡಿ ದಿನಾಂಕ:10-09-2024ರ ಪೂರ್ವದಲ್ಲಿ, ನೋಂದಾಯಿತ ಪತ್ರದ ಮೂಲಕ ವಹಿವಾಟು ನಡೆಸಿ ನಗರ ಸ್ಥಳೀಯ ಸಂಸ್ಥೆಗಳಿಂದ ಖಾತಾ ನೀಡಲಾಗಿರುವ ಪ್ರಕರಣಗಳು:</u>**

i. ಉಪ-ವಿಭಾಗ ಮಾಡಲಾದ ಖಾಲಿ ನಿವೇಶನಕ್ಕೆ ಸಂಪರ್ಕಿಸಲು ಸಾರ್ವಜನಿಕ ರಸ್ತೆ ಇರುವುದು ಕಡ್ಡಾಯವಾಗಿರುತ್ತದೆ. ಅಂತಹ ಖಾಲಿ ನಿವೇಶನಕ್ಕೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸಬೇಕಾಗುತ್ತದೆ.

ii. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಬೇಕು ಅಥವಾ ಸದರಿ ಕಲಂ 95 ರ ತಿದ್ದುಪಡಿಯಂತೆ ಅನುಮೋದಿತ ಮಾಸ್ಟರ್ ಪ್ಲಾನ್ ವ್ಯಾಪ್ತಿಗೆ ಭೂಮಿ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್‌ನಲ್ಲಿ ಸೂಚಿಸಲಾದ ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯನ್ನು ಪರಿವರ್ತಿಸಲು ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95(7) ರಡಿಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಕೆಟಿಸಿಪಿ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಅನುಮೋದನೆ ಪಡೆಯುವಾಗ ಪ್ರಾಧಿಕಾರಕ್ಕೆ ಪಾವತಿಸಬೇಕಾಗುತ್ತದೆ.

iii. ಅಂತಹ ಉಪ-ವಿಭಜಿತ ಖಾಲಿ ನಿವೇಶನಕ್ಕೆ ಕೆಟಿಸಿಪಿ ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ಪಡೆಯಬೇಕಾಗುತ್ತದೆ.

iv. ವಿನ್ಯಾಸ ಅನುಮೋದನೆ ಆದ ನಂತರ ಅಂತಹ ಉಪ-ವಿಭಜಿತ ಕಂದಾಯ ಖಾಲಿ ನಿವೇಶನಕ್ಕೆ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 112 ಪ್ರಕಾರ ಎ-ಖಾತಾ ನೀಡಬಹುದು.

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಮೇಲ್ಕಂಡ ಶಿಫಾರಸ್ಸಿನನ್ವಯ ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನೆ ಆಯುಕ್ತಾಲಯ ಇವರ ಅಭಿಪ್ರಾಯ ಪಡೆದು ಪ್ರಸ್ತಾವನೆಯನ್ನು ಸರ್ಕಾರವು ಅವಲೋಕಿಸಿದೆ.

ಈ ಪ್ರಸ್ತಾವನೆಯು ಅನಧಿಕೃತ ಬೆಳವಣಿಗೆಗಳನ್ನು ನಿಯಂತ್ರಿಸಲು, ಸಾರ್ವಜನಿಕ ಹಿತದೃಷ್ಟಿ ಹಾಗೂ ನಾಗರೀಕ ಸ್ನೇಹಿ ಸುಧಾರಣೆಗಳನ್ನು ಆಡಳಿತ ವ್ಯವಸ್ಥೆಯಲ್ಲಿ ಹಾಗೂ ವಿನ್ಯಾಸಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೇ ನಿವೇಶನಗಳನ್ನು ರಚಿಸಿ, ಪರಭಾರೆ ಮಾಡುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ತಡೆಯುವ ಉದ್ದೇಶದಿಂದ ಈಗಾಗಲೇ ಅನಧಿಕೃತವಾಗಿ ರಚಿತವಾಗಿರುವ ಬಡಾವಣೆಗಳನ್ನು ಕಾನೂನು ವ್ಯಾಪ್ತಿಗೆ ತರುವ ಉದ್ದೇಶವನ್ನು ಹೊಂದಿದ್ದು, ಸದರಿ ಪ್ರಸ್ತಾವನೆಯನ್ನು ಪರಿಗಣಿಸುವುದರಿಂದ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸಬಲವಾಗಿ, ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ನೀಡಬಹುದಾಗಿರುತ್ತದೆ.

ಮೇಲ್ಕಂಡ ಉದ್ದೇಶಗಳನ್ನು ಹೊಂದಿರುವ ಪ್ರಸ್ತಾವನೆಯನ್ನು ಸರ್ಕಾರವು ವಿವರವಾಗಿ ಪರಿಶೀಲಿಸಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಅಧ್ಯಕ್ಷತೆಯಲ್ಲಿನ ಸಮಿತಿಯು ನೀಡಿರುವ ಮೇಲಿನ ಶಿಫಾರಸ್ಸುಗಳನ್ನು ಸರ್ಕಾರವು ಪರಿಗಣಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ನಅಇ 178 ಬಿಇಎಲ್ 2025 (ಇ), ದಿನಾಂಕ: 17.01.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಅನ್ನು ಉಲ್ಲಂಘಿಸಿ, ಅನಧಿಕೃತವಾಗಿ ರಚಿಸಿರುವ ಬಡಾವಣೆಗಳಲ್ಲಿನ ಬಿ-ಖಾತಾ ನಿವೇಶನ / ಕಟ್ಟಡ / ಅಪಾರ್ಟ್‌ಮೆಂಟ್ / ಫ್ಲಾಟ್‌ಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಅನುಬಂಧದಲ್ಲಿ ವಿವರಿಸಿರುವ ಪ್ರಕರಣಗಳು ಹಾಗೂ ಮಾರ್ಗಸೂಚಿಗಳನ್ವಯ ಎ-ಖಾತಾ ನೀಡಲು ಸರ್ಕಾರದ ಅನುಮೋದನೆ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಕಡತ ಸಂಖ್ಯೆ: ಆಇ 523 ವೆಚ್ಚ-9/2025 ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಸಚಿವ ಸಂಪುಟವು ಪ್ರಕರಣ ಸಂಖ್ಯೆ:ಸಿ/27/2026, ದಿನಾಂಕ:08.01.2026 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

17/01/2026

(ಮಹಾಂತಪ್ಪ.ಎಸ್.ತುರಕನೂರ)
ಸರ್ಕಾರದಅಧೀನಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಪೌರಾಡಳಿತ-2 ಮತ್ತುಮಂಡಳಿ)

**ಇವರಿಗೆ:**

1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ. ಗೋಪುರ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
4. ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರುಗಳಿಗೆ.
5. ರಾಜ್ಯದ ಎಲ್ಲಾ ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಯೋಜನಾ ನಿರ್ದೇಶಕರುಗಳಿಗೆ.
6. ರಾಜ್ಯದ ಎಲ್ಲಾ ನಗರಸಭೆಗಳ ಪೌರಾಯುಕ್ತರುಗಳಿಗೆ.
7. ರಾಜ್ಯದ ಎಲ್ಲಾ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳಿಗೆ.
8. ಶಾಖಾರಕ್ಷಾ ಕಡತ / ಹೆಚ್ಚುವರಿಪ್ರತಿಗಳು.

**ಪ್ರತಿಮಾಹಿತಿಗಾಗಿ:**

1. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು- (ವಿಷಯಸಂಖ್ಯೆ:ಸಿ/27/2026).
3. ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.

**ಸರ್ಕಾರದ ಆದೇಶ ಸಂಖ್ಯೆ: ನಅಇ 178 ಜಿಇಎಲ್ 2025 (ಇ), ದಿನಾಂಕ: 17.01.2026ರ,**

**ಅನುಬಂಧ**

**ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ರಚಿಸಿರುವ ಬಡಾವಣೆಗಳಲ್ಲಿನ ಬಿ-ಖಾತಾ ನಿವೇಶನ / ಕಟ್ಟಡ / ಅಪಾರ್ಟ್‌ಮೆಂಟ್ / ಫ್ಲ್ಯಾಟ್‌ಗಳಿಗೆ ಎ-ಖಾತಾ ನೀಡುವ ಕುರಿತು ಮಾರ್ಗಸೂಚನೆಗಳು.**

1. **ನಗರ ಸ್ಥಳೀಯ ಸಂಸ್ಥೆಗಳಿಂದ ಈಗಾಗಲೇ ಬಿ-ಖಾತಾ ನೀಡಿ, ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿರುವ ಖಾಲಿ ನಿವೇಶನಗಳು:**

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಿ-ಖಾತಾ ಹೊಂದಿರುವ ನಿವೇಶನಗಳಲ್ಲಿ ಅನಧಿಕೃತ ನಿರ್ಮಾಣಗಳಿಗೆ ಯಾವುದೇ ಕಟ್ಟಡ ವಿನ್ಯಾಸ ಅನುಮೋದನೆಯನ್ನು ನೀಡದ ಕಾರಣ, ಇದು ಅನಿಯಂತ್ರಿತ ನಿರ್ಮಾಣಗಳಿಗೆ ಕಾರಣವಾಗುತ್ತಿರುವುದರಿಂದ ಅಂತಹ ಸಂದರ್ಭಗಳಲ್ಲಿ ಈ ಕೆಳಗಿನ ಕ್ರಮಗಳನ್ನು ಅನ್ವಯಿಸತಕ್ಕದ್ದು.

a. ಖಾಲಿ ನಿವೇಶನಕ್ಕೆ ಸಂಪರ್ಕಿಸುವ ಸಾರ್ವಜನಿಕ ರಸ್ತೆ ಇದೆ ಎಂದು ಖಚಿತಪಡಿಸಿಕೊಳ್ಳಬೇಕು. ಅಂತಹ ಖಾಲಿ ನಿವೇಶನಕ್ಕೆ ಅಥವಾ ಭೂಮಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸುವುದು.

b. ಸದರಿ ಆಸ್ತಿ ಭೂಪರಿವರ್ತನೆ ಆಗದ ಜಮೀನಿನ ವ್ಯಾಪ್ತಿಯಲ್ಲಿ ಇದ್ದಲ್ಲಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಬೇಕು ಅಥವಾ ಸದರಿ ಕಾಯ್ದೆಯ ಕಲಂ 95 ರ ತಿದ್ದುಪಡಿಯಂತೆ ಸದರಿ ಭೂಮಿಯು ನಗರ ಸ್ಥಳಿಯ ಸಂಸ್ಥೆಗಳ ಅನುಮೋದಿತ ಪರಿಷ್ಕೃತ ಮಾಸ್ಟರ್ ಪ್ಲಾನ್ ವ್ಯಾಪ್ತಿಗೆ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್ ನಲ್ಲಿ ಸೂಚಿಸಿದಂತೆ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95(7) ರಡಿಯಲ್ಲಿ ನಿಗಧಿಪಡಿಸಿದ ಶುಲ್ಕವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಅನುಮೋದನೆ ಪಡೆಯುವಾಗ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿದಾರರು ಪಾವತಿಸತಕ್ಕದ್ದು.

c. ಭೂಪರಿವರ್ತನೆ ನಂತರದಲ್ಲಿ ಅಂತಹ ಖಾಲಿ ನಿವೇಶನಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ನೀಡುವುದು.

d. ವಿನ್ಯಾಸ ಅನುಮೋದನೆ ಪಡೆದ ನಂತರ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 112 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕೃತ (ಎ-ಖಾತಾ) ಖಾತಾ ನೀಡುವುದು.

2. **ನಗರ ಸ್ಥಳೀಯ ಸಂಸ್ಥೆಗಳಿಂದ ಈಗಾಗಲೇ ಬಿ-ಖಾತಾ ಪಡೆದು ಅಥವಾ ಪಡೆಯದ ಪರವಾನಿಗೆ ಇಲ್ಲದೇ ನಿರ್ಮಾಣ ಮಾಡಲಾದ ಕಟ್ಟಡಗಳು:**

a. ಕಟ್ಟಡ ನಿರ್ಮಾಣ ಮಾಡಿರುವ ನಿವೇಶನಕ್ಕೆ ಸಂಪರ್ಕಿಸುವ ಸಾರ್ವಜನಿಕ ರಸ್ತೆ ಇದೆ ಎಂದು ಖಚಿತಪಡಿಸಿಕೊಳ್ಳಬೇಕು. ಅಂತಹ ಕಟ್ಟಡ ನಿರ್ಮಾಣ ಮಾಡಿರುವ ನಿವೇಶನಕ್ಕೆ ಅಥವಾ

ಭೂಮಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸುವುದು.

b. ಸದರಿ ಆಸ್ತಿ ಭೂಪರಿವರ್ತನೆ ಆಗದ ಜಮೀನಿನ ವ್ಯಾಪ್ತಿಯಲ್ಲಿ ಇದ್ದಲ್ಲಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಬೇಕು ಅಥವಾ ಸದರಿ ಕಾಯ್ದೆಯ ಕಲಂ 95 ರ ತಿದ್ದುಪಡಿಯಂತೆ ಸದರಿ ಭೂಮಿಯು ನಗರ ಸ್ಥಳೀಯ ಸಂಸ್ಥೆಗಳ ಅನುಮೋದಿತ ಪರಿಷ್ಕೃತ ಮಾಸ್ಟರ್ ಪ್ಲಾನ್ ವ್ಯಾಪ್ತಿಗೆ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್ ನಲ್ಲಿ ಸೂಚಿಸಿದಂತೆ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95(7) ರಡಿಯಲ್ಲಿ ನಿಗಧಿಪಡಿಸಿದ ಶುಲ್ಕವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಅನುಮೋದನೆ ಪಡೆಯುವಾಗ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿದಾರರು ಪಾವತಿಸತಕ್ಕದ್ದು.

c. ಭೂಪರಿವರ್ತನೆ ನಂತರದಲ್ಲಿ ಕಟ್ಟಡವಿರುವ ನಿವೇಶನಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ನೀಡುವುದು.

d. ವಿನ್ಯಾಸ ಅನುಮೋದನ ಪಡೆದ ನಂತರ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 112 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕೃತ (ಎ-ಖಾತಾ) ಖಾತಾ ನೀಡುವುದು.

e. ಅಸ್ತಿತ್ವದಲ್ಲಿರುವ ಕಟ್ಟಡವು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 187 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ಕಲಂ 300 ಅಥವಾ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಡಿಯಲ್ಲಿ ಅಥವಾ ಸದರಿ ಕಾಯ್ದೆಗಳಡಿ ಮಾಡಲಾದ ವಲಯ ನಿಯಮಗಳನ್ವಯ ಕಟ್ಟಡ ಪರವಾನಿಗೆ ನೀಡಲು ಅರ್ಹವಾಗಿದ್ದಲ್ಲಿ, ಕಟ್ಟಡ ಪರವಾನಿಗೆ ನೀಡುವುದು ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವುದು.

f. ಒಂದು ವೇಳೆ ಅಂತಹ ಕಟ್ಟಡವು ವಲಯ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ, ಸದರಿ ಕಟ್ಟಡಕ್ಕೆ "ವಲಯ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ನಿರ್ಮಾಣ ಮಾಡಲಾದ ಕಟ್ಟಡ" ಎಂದು ಷರಾ ದಾಖಲಿಸಿ, ಬಿ-ಖಾತಾ ನೀಡುವುದು. ಕಟ್ಟಡಗಳನ್ನು ವಲಯ ನಿಮಾವಳಿಗಳಿಗೆ ಹಾಗೂ ಮಹಾಯೋಜನೆಗೆ ಅನುಗುಣವಾಗಿಸಲಾದಲ್ಲಿ, ಅಂಥಹ ಪ್ರಕರಣಗಳಲ್ಲಿ ಎ-ಖಾತಾ ನೀಡುವುದು.

3. **<u>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಉಲ್ಲಂಘಿಸಿ ನಿರ್ಮಾಣ ಮಾಡಲಾದ Apartment / ಘಟಕಗಳು:</u>**

a. ಅನುಮೋದನೆಯೊಂದಿಗೆ ನಿರ್ಮಿಸಲಾದ Apartment / ಘಟಕಕ್ಕೆ ಸಂಪರ್ಕಿಸುವ ಸಾರ್ವಜನಿಕ ರಸ್ತೆ ಇದೆ ಎಂದು ಖಚಿತಪಡಿಸಿಕೊಳ್ಳಬೇಕು. ಅಂತಹ Apartment / ಘಟಕಕ್ಕೆ ಅಥವಾ ಭೂಮಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸುವುದು.

b. ಒಂದು ವೇಳೆ ಸದರಿ ಕಟ್ಟಡ / ಫ್ಲಾಟ್ ಗಳು ಇನ್ನೂ ಸಹ ಅಭಿವೃದ್ಧಿದಾರರು ಅಥವಾ ಮಾಲೀಕರ ಹೆಸರಿನಲ್ಲಿ ಇದ್ದಲ್ಲಿ,

1. ಸದರಿ ಆಸ್ತಿ ಭೂಪರಿವರ್ತನೆ ಆಗದ ಜಮೀನಿನ ವ್ಯಾಪ್ತಿಯಲ್ಲಿ ಇದ್ದಲ್ಲಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಬೇಕು ಅಥವಾ ಸದರಿ ಕಾಯ್ದೆಯ ಕಲಂ 95 ರ ತಿದ್ದುಪಡಿಯಂತೆ ಸದರಿ ಭೂಮಿಯು ನಗರ ಸ್ಥಳೀಯ ಸಂಸ್ಥೆಗಳ ಅನುಮೋದಿತ ಪರಿಷ್ಕೃತ ಮಾಸ್ಟರ್ ಪ್ಲಾನ್ ವ್ಯಾಪ್ತಿಗೆ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್ ನಲ್ಲಿ ಸೂಚಿಸಿದಂತೆ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95(7) ರಡಿಯಲ್ಲಿ ನಿಗಧಿಪಡಿಸಿದ ಶುಲ್ಕವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಅನುಮೋದನೆ ಪಡೆಯುವಾಗ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿದಾರರು ಪಾವತಿಸತಕ್ಕದ್ದು.
2. ಭೂಪರಿವರ್ತನೆ ನಂತರದಲ್ಲಿ ಕಟ್ಟಡವಿರುವ ನಿವೇಶನಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ನೀಡುವುದು.
3. ಅಸ್ತಿತ್ವದಲ್ಲಿರುವ ಕಟ್ಟಡವು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 187 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ಕಲಂ 300 ಅಥವಾ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಡಿಯಲ್ಲಿ ಅಥವಾ ಸದರಿ ಕಾಯ್ದೆಗಳಡಿ ಮಾಡಲಾದ ವಲಯ ನಿಯಮಗಳನ್ವಯ ಕಟ್ಟಡ ಪರವಾನಿಗೆ ನೀಡಲು ಅರ್ಹವಾಗಿದ್ದಲ್ಲಿ, ಕಟ್ಟಡ ಪರವಾನಿಗೆ ನೀಡುವುದು. ನಂತರದಲ್ಲಿ ಸದರಿ ಫ್ಲಾಟ್ ಗಳಿಗೆ ಎ-ಖಾತಾ ನೀಡುವುದು.
4. ಒಂದು ವೇಳೆ ಅಂತಹ ಕಟ್ಟಡವು ವಲಯ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ, ಸದರಿ ಫ್ಲಾಟ್ ಗಳಿಗೆ ಬಿ-ಖಾತಾ ನೀಡುವುದು.

c. ಒಂದು ವೇಳೆ ಬಹುಮಹಡಿ ಕಟ್ಟಡ / ಫ್ಲಾಟ್ ಗಳ ಮಾರಾಟವು ದಿನಾಂಕ:10-09-2024ರ ಪೂರ್ವದಲ್ಲಿ ಆಗಿದ್ದು, ಸದರಿ ಫ್ಲಾಟ್ ಗಳಿಗೆ ಪ್ರಸ್ತುತ ಮಾಲೀಕರುಗಳು ಅರ್ಜಿ ಸಲ್ಲಿಸಿ ಬಿ-ಖಾತಾ ಪಡೆಯುವುದು. ಒಂದು ವೇಳೆ ಈಗಾಗಲೇ ಭೂಪರಿವರ್ತನೆಯಾಗಿದ್ದು, ಕ್ರಮ ಸಂಖ್ಯೆ b ರಲ್ಲಿನ 2 ಮತ್ತು 3 ಅಂಶಗಳನ್ನು ಪೂರೈಸಿದ್ದಲ್ಲಿ ಎ-ಖಾತಾ ನೀಡುವುದು.

4. **<u>ಭೂ ಪರಿವರ್ತನೆ ಆಗದೇ ಕಂದಾಯ ಸರ್ವೆ ಸಂಖ್ಯೆ / ಹಿಸ್ಸಾ ಸರ್ವೆ ಸಂಖ್ಯೆ ಹೊಂದಿರುವ ವಿಭಜನೆ ಮಾಡದೇ KTCP ಕಾಯ್ದೆ 1961 ರಡಿ ಅನುಮೋದನೆ ಪಡೆಯದಿರುವ ಖಾಲಿ ಭೂಮಿಗೆ ಖಾತಾ ನೀಡುವ ಪ್ರಕ್ರಿಯೆ:</u>**

ಕರ್ನಾಟಕ ಭೂಕಂದಾಯ ಕಾಯ್ದೆ, 1964 ರಡಿಯಲ್ಲಿ ಕಂದಾಯ ಸರ್ವೆ ಸಂಖ್ಯೆ ಅಥವಾ ಹಿಸ್ಸಾ ಸರ್ವೆ ಸಂಖ್ಯೆಯನ್ನು ಹೊಂದಿರುವ ಭೂಮಿಯು ಪರಿವರ್ತಿಸದ ಕೃಷಿ ಭೂಮಿಯಾಗಿದ್ದು, ಅಂತಹ ಜಾಗಕ್ಕೆ ಈ ಕೆಳಗಿನ ಕ್ರಮಗಳನ್ನು ಅನುಸರಿಸಿದ ನಂತರ ನಗರ ಸ್ಥಳೀಯ ಸಂಸ್ಥೆಗಳಿಂದ ಖಾತಾ ನೀಡುವುದು.

a. ಖಾಲಿ ನಿವೇಶನಕ್ಕೆ ಸಂಪರ್ಕಿಸುವ ಸಾರ್ವಜನಿಕ ರಸ್ತೆ ಇದೆ ಎಂದು ಖಚಿತಪಡಿಸಿಕೊಳ್ಳಬೇಕು. ಖಾಲಿ ನಿವೇಶನ ಅಥವಾ ಭೂಮಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಅಂತಹ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ

ಕಾಯ್ದೆ 1976 ರ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸುವುದು.

b. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಬೇಕು ಅಥವಾ ಸದರಿ ಕಾಯ್ದೆಯ ಕಲಂ 95 ರ ತಿದ್ದುಪಡಿಯಂತೆ ಸದರಿ ಭೂಮಿಯು ನಗರ ಸ್ಥಳೀಯ ಸಂಸ್ಥೆಗಳ ಅನುಮೋದಿತ ಪರಿಷ್ಕೃತ ಮಾಸ್ಟರ್ ಪ್ಲಾನ್ ವ್ಯಾಪ್ತಿಗೆ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್ ನಲ್ಲಿ ಸೂಚಿಸಿದಂತೆ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95(7) ರಡಿಯಲ್ಲಿ ನಿಗಧಿಪಡಿಸಿದ ಶುಲ್ಕವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಅನುಮೋದನೆ ಪಡೆಯುವಾಗ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿದಾರರು ಪಾವತಿಸತಕ್ಕದ್ದು.

c. ಭೂಪರಿವರ್ತನೆ ನಂತರದಲ್ಲಿ ಅಂತಹ ನಿವೇಶನ / ಜಾಗಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ನೀಡುವುದು.

d. ವಿನ್ಯಾಸ ಅನುಮೋದನೆ ಪಡೆದ ನಂತರ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 112 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕೃತ (ಎ-ಖಾತಾ) ಖಾತಾ ನೀಡುವುದು.

e. ಇಂಥಹ ಖಾಲಿ ನಿವೇಶನ / ಜಾಗಗಳಿಗೆ ಕರ್ನಾಟಕ ಭೂಕಂದಾಯ ಕಾಯ್ದೆ 1964, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961, ಕರ್ನಾಟಕ ಪೌರಸಭೆಗಳ ಕಾಯ್ದೆ 1964 ಹಾಗೂ ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರಡಿ ಅಗತ್ಯವಿರುವ ಅನುಮೋದನೆಗಳನ್ನು ಪಡೆಯಲು ಅವಕಾಶವಿರುವುದರಿಂದ ಬಿ- ಖಾತಾ ನೀಡಲಾಗುವುದಿಲ್ಲ.

5. **<u>ಭೂಪರಿವರ್ತನೆಯಾದ ನಂತರದಲ್ಲಿ ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೆ ಖಾಲಿ ಭೂಮಿಯನ್ನು ಉಪ-ವಿಭಾಗ ಮಾಡಿ ನೋಂದಾಯಿತ ಪತ್ರಗಳ ಮೂಲಕ ದಿನಾಂಕ 10-09-2024ರ ಪೂರ್ವದಲ್ಲಿ ಮಾರಾಟ ಮಾಡಿದ ಪ್ರಕರಣಗಳು:</u>**

a. ಉಪ-ವಿಭಾಗ ಮಾಡಲಾದ ಖಾಲಿ ನಿವೇಶನಕ್ಕೆ ಸಂಪರ್ಕಿಸುವ ಸಾರ್ವಜನಿಕ ರಸ್ತೆ ಇದೆ ಎಂದು ಖಚಿತಪಡಿಸಿಕೊಳ್ಳಬೇಕು. ಅಂತಹ ಖಾಲಿ ನಿವೇಶನ ಅಥವಾ ಭೂಮಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ 284 ರ ನಿಬಂಧನೆಗಳ ಪ್ರಕಾರ **"ಸಾರ್ವಜನಿಕ ರಸ್ತೆ"** ಎಂದು ಘೋಷಿಸುವುದು.

b. ಅಂತಹ ಉಪ-ವಿಭಜಿತ ಖಾಲಿ ನಿವೇಶನಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ನೀಡುವುದು.

c. ವಿನ್ಯಾಸ ಅನುಮೋದನೆ ಪಡೆದ ನಂತರ ಅಂತಹ ಉಪ-ವಿಭಜಿತ ಖಾಲಿ ನಿವೇಶನಕ್ಕೆ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 112 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕೃತ (ಎ-ಖಾತಾ) ಖಾತಾ ನೀಡುವುದು.

6. <u>ಭೂಪರಿವರ್ತನೆಯಾಗದೇ ಕಂದಾಯ ಭೂಮಿಯನ್ನು ಅನಧಿಕೃತ ಉಪ-ವಿಭಾಗ ಮಾಡಿ ದಿನಾಂಕ:10-09-2024ರ ಪೂರ್ವದಲ್ಲಿ ನೋಂದಾಯಿತ ಪತ್ರದ ಮೂಲಕ ವಹಿವಾಟು ನಡೆಸಿ ನಗರ ಸ್ಥಳೀಯ ಸಂಸ್ಥೆಗಳಿಂದ ಖಾತಾ ನೀಡಲಾಗಿರುವ ಪ್ರಕರಣಗಳು:</u>

a. ಉಪ-ವಿಭಾಗ ಮಾಡಲಾದ ಖಾಲಿ ನಿವೇಶನಕ್ಕೆ ಸಂಪರ್ಕಿಸುವ ಸಾರ್ವಜನಿಕ ರಸ್ತೆ ಇದೆ ಎಂದು ಖಚಿತಪಡಿಸಿಕೊಳ್ಳಬೇಕು. ಅಂತಹ ಖಾಲಿ ನಿವೇಶನ ಅಥವಾ ಭೂಮಿಗೆ ಸಂಪರ್ಕಿಸುವ ಖಾಸಗಿ ರಸ್ತೆ ಇದ್ದರೆ, ಅದನ್ನು ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 177 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ 284 ರ ನಿಬಂಧನೆಗಳ ಪ್ರಕಾರ "**ಸಾರ್ವಜನಿಕ ರಸ್ತೆ**" ಎಂದು ಘೋಷಿಸುವುದು.

b. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಡಿಯಲ್ಲಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಬೇಕು ಅಥವಾ ಸದರಿ ಕಾಯ್ದೆಯ ಕಲಂ 95 ರ ತಿದ್ದುಪಡಿಯಂತೆ ಸದರಿ ಭೂಮಿಯು ನಗರ ಸ್ಥಳಿಯ ಸಂಸ್ಥೆಗಳ ಅನುಮೋದಿತ ಪರಿಷ್ಕೃತ ಮಾಸ್ಟರ್ ಪ್ಲಾನ್ ವ್ಯಾಪ್ತಿಗೆ ಬಂದರೆ, ಅನುಮೋದಿತ ಮಾಸ್ಟರ್ ಪ್ಲಾನ್ ನಲ್ಲಿ ಸೂಚಿಸಿದಂತೆ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿಲ್ಲ. ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95(7) ರಡಿಯಲ್ಲಿ ನಿಗಧಿಪಡಿಸಿದ ಶುಲ್ಕವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ಅನುಮೋದನೆ ಪಡೆಯುವಾಗ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿದಾರರು ಪಾವತಿಸತಕ್ಕದ್ದು.

c. ಅಂತಹ ಉಪ-ವಿಭಜಿತ ಖಾಲಿ ನಿವೇಶನಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ "ಏಕ ನಿವೇಶನ ಅಥವಾ ಬಹು ನಿವೇಶನ ವಿನ್ಯಾಸ" ಆಗಿ ಸಂಬಂಧಿತ ಅನುಮೋದನೆಯನ್ನು ನೀಡುವುದು.

d. ವಿನ್ಯಾಸ ಅನುಮೋದನೆ ಪಡೆದ ನಂತರ ಅಂತಹ ಉಪ-ವಿಭಜಿತ ಖಾಲಿ ನಿವೇಶನಕ್ಕೆ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಕಲಂ 106 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976 ರ ಕಲಂ 112 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕೃತ (ಎ-ಖಾತಾ) ಖಾತಾ ನೀಡುವುದು.

17/01/2026

(ಮಹಾಂತಪ್ಪ ಎಸ್. ತುರಕನೂರ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಪೌರಾಡಳಿತ-2 ಮತ್ತು ಮಂಡಳಿ)